ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಪಾರ್ಲಿಮೆಂಟ್ ಮೆಂಬರ್ ಟೆಂಡರನ್ನು ಬಿ ಡಿ ಓ. ಆಕ್ಸೆಪ್ಟ್ ಮಾಡುವುದೂ ಎಂದು ಹೇಳಿದರೆ ಏನು? ನಾನು ಅವರ ಬಗ್ಗೆ ಏನೂ ಆಪಾದನೆ ಮಾಡುವುದಿಲ್ಲ. ಏಕೆಂದರೆ ಇಂಥಾದ್ದನ್ನು ನೋಡುವವರಿಗೆ ನಿಜವಾಗಿ ಸಂಶಯ ಬರುತ್ತದೆ, ಬಳ್ಳಾರಿಯಲ್ಲಿ ಅಸಿಸ್ಟೆಂಟ್ ಕಮೀಷನರ್, ಹಾಗೂ ಜಿಲ್ಲಾಧಿಕಾರಿಗಳು ಇರಲಿಲ್ಲವೇ ? ಅಂತಹವರಿಗೆ ಇಂತಹ ಅಧಿಕಾರ ಕೊಟ್ಟರೆ ಒಳ್ಳೆಯದಲ್ಲವೇ ? ಯಾರು ಅವರ ಹತ್ತಿರ ಹೋಗುವುದಿಲ್ಲವೋ ಅಂತಹವರಿಗೆ ಅಲಾಟ್‌ಮೆಂಟ್ ಸಿಗುವುದಿಲ್ಲವೆಂಬುದು ನನ್ನ ಆಪಾದನೆ ಈರಪ್ಪ, ಬಸಪ್ಪ ಎಂದು ಹೇಳುವವರಿಗೆ ಮಾತ್ರ ಅಲ್ಲಿ ಅಲಾಟ್‌ಮೆಂಟ್ ಸಿಗುತ್ತದೆ. ಅದು ನ್ಯಾಯವಲ್ಲ. ಆ ದೃಷ್ಟಿಯಿಂದ ನಾನು ಈಗ ಈ ಕಾಲ್‌ಅಟೆನ್‌ಷನ್ ಹಾಕಿದ್ದೇನೆ.

ಶ್ರೀ ಆರ್. ಗುಂಡೂರಾವ್.—ತಾವು ಕಾಲ್‌ಅಟೆನ್‌ಷನ್‌ನಲ್ಲಿ ಕೇಳಿರುವುದು ಒಂದು ಟೆಂಡರ್ ಬಗ್ಗೆ. ಅದರ ಬಗ್ಗೆ ಮಾಹಿತಿ ಕೊಟ್ಟಿದೆ. ಮೊದಲು ಅವರು ಎಂ. ಪಿ. ಆಗಿರಲಿಲ್ಲ ಅದನ್ನಾದರೂ ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಯೇ, ಟೆಂಡರ್ ಹಾಕಿದಾಗ ಅವರು ಕಾಂಟ್ರಾಕ್ಟ್ ಕೆಲಸವನ್ನು ಮಾಡಿಸುತ್ತಿದ್ದರು. ಆಮೇಲೆ ಎಂ.ಪಿ ಆದರು. ಅವರು ಎಂ.ಪಿ. ಆದಾಕ್ಷಣಕ್ಕೆ ಅವರ ಟೆಂಡರನ್ನು ಬಿ. ಡಿ. ಓ. ಸ್ಯಾಂಕ್ಷನ್ ಮಾಡಬಾರದೆಂಬ ಪ್ರಶ್ನೆ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಎಗ್ಸಾಮಿನ್ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಇದರ ಬಗ್ಗೆ ಸಾಕಷ್ಟು ಪ್ರಚಾರ ಮಾಡಿ ಟೆಂಡರ್ ಕರೆದಿದ್ದೇವೆ. ಅವರೊಬ್ಬರದೇ ಕಡಿಮೆ ಟೆಂಡರ್ ಬಂದಿದ್ದರಿಂದ ಅವರಿಗೇ ಕೊಟ್ಟಿದ್ದೇವೆ.

MADAM SPEAKER.—The calling attention notices of Sri K Puttaswamy and Sri B. V. Kakkilaya will be taken up tom rrow. Now laying of Papers.

PAPERS LAID ON THE TABLE

SRI M. MOHAMMED ALI (Minister for Transport & Tourism).—I beg to lay.

(1) Notification No. GSR 84 dated 5th March, 1977 The Karnataka Motor Vehicles (First Amendment) Rules, 1977

(2) Notification No GSR 85 date 5th March, 1977
The Karnataka Motor Vehicles(Second Amendment) Rules, 1977.

(3) Notification No GSR 91 dated 14th March 1977
The Karnataka Motor Vehicles (Third Amendment) Rule 1977

(4) Notification No GSR 117 dated 31st March 1977
The Karnataka Motor Vehicles Fifth (Amendment) Rules 1977

(5) Notification No. GSR 173 dated 26th May, 1977
The Karnataka Motor Vehicles (Seventh Amendment) Rules, 1977

(6) Notification No. GSR 115 dated 30th March, 1977
The State Transport Undertaking (Karnataka) Rules, 1976
Under section 133 of the Karnataka Motor Vehicles Act 1939

(7) Notification No. S. O. 625, dated 26th February, 1977 Exemption of Road Tax for aviation Refueller No. DLH 9812 of Indian Oil Company Limited, Bangalore. under section 16(2) of Karnataka Motor Vehicles Taxation Act, 1957.

Sri MALLIKARJUNA KHARGE (Minister of State for Primary and Secondary Education).—I big to lay.

Annual Administration Report of theKarnataka Secondary Education Examination Board for the period from 1-8-1977 to 31-3-1977.

under sub-section 3 of Section 25 of the Karnataka Secondary Education Examination Board Act, 1966.

Sri D. K. Naikar (Minister for Municipal Administration and Political Pension)—I beg to lay on the Table the Agreement files pertaiing to Civil works in respect of.—

(1) Public Utility Buildings (pages 12+128-140)

(2) Jayanagar Shoping Complex (80 pages).

In pursuance of assurance held outby him while replying to Starred Question No. 117 (150) of Sri T. R. Shamanna on 21-4-1977.

MADAM SPEAKR.—All the Papers are laid on the table.

Admissions at the Kasturba Medical College Manipal and Mangalore.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇವತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ಕೇಂದ್ರ ಸರ್ಕಾರಕ್ಕೆ ಸೇರಿದ ಇಂಡಿಯನ್ ಟೆಲಿಫೋನ್ ಕಾರ್ಖಾನೆಯ ಸರ್ಕ್ಯುಲರನ್ನು ಕೇವಲ ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಾತ್ರ ಕೊಟ್ಟಿದ್ದಾರೆ ಎನ್ನುವುದು ಪತ್ರಿಕೆಯಲ್ಲಿ ಇವತ್ತು ಬಂದಿದೆ. ಇದು ಸರಿಯಲ್ಲ, ಮೊನೆ ಕೂಡ ಈ ಸಭೆಯಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಿದೆ. ಆಗ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಟ್ಟರು. ಆದರಿಂದ ಇನ್ನು ಮುಂದಾದರೂ ಪ್ರಾಂತೀಯ ಭಾಷೆ ಮತ್ತು ಹಿಂದಿಯಲ್ಲಿ ಬರಬೇಕು. ಅವಶ್ಯಕತೆ ಇದ್ದರೆ ಆಂಗ್ಲ ಭಾಷೆಯಲ್ಲಿ ಇಂತಹ ಸುತ್ತೋಲೆಗಳನ್ನು ಕಳುಹಿಸುವಂತೆ ಮಾಡಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಮ್ಮ ಕಳವಳವನ್ನು ವ್ಯಕ್ತಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎ ಕಕ್ಕಿಲಾಯ.—ಇದರ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದಾಗ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಗೊತ್ತಾಯಿತು. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರದವರ ಜೊತೆಯಲ್ಲಿ ಪತ್ರವ್ಯವಹಾರ ನಡೆಸುತ್ತಿದಾರೆಯೇ ಎನ್ನುವುದರ ಬಗ್ಗೆ ಕೇಳಿದ್ದಕ್ಕೆ ಪತ್ರವ್ಯವಹಾರ ನಡೆಸುತ್ತಿದ್ದೇವೆಂದು ಹೇಳಿದರು ಆದರೆ ಇವತ್ತಿನ ಪತ್ರಿಕೆಯನ್ನು ನೋಡಿದರೆ ಸಂಶಯ ಬರುತ್ತದೆ ಆದ್ದರಿಂದ ಈಗಲೂ ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಪತ್ರವ್ಯವಹಾರ ನಡೆಸಿ ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.